**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

ಓಎಸ್.222–2010

ಪಿ.ಡಬ್ಲ್ಯೂ.1

ಹೆಸರು ಃ ಮಂಜುನಾಥ

ಪ್ರಮಾಣೀಕೃತ ದಿನಾಂಕಃ–17.07.2018

**ಪಾಟೀ ಸವಾಲು: 1,5, ಮತ್ತು 6ನೇ ಪ್ರತಿವಾದಿ ಪರ ವಕೀಲರಿಂದಃ–**

ಚೆನ್ನಪ್ಪನವರಿಗೆ ಕ್ರಯ ಪತ್ರದ ಮೂಲಕ ದಾವಾ ಸ್ವತ್ತು ಬಂದ ವಿಚಾರ ನಮಗೆ ನಮ್ಮ ಚಿಕ್ಕಪ್ಪನವರಿಂದ ತಿಳಿದುಬಂದಿರುತ್ತದೆ. ನಾನು ದಾಖಲಾತಿಗಳನ್ನು ನೋಡಿದ್ದೇನೆ. ಮೂಲ ಕ್ರಯ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ.ದಾವಾ ಹೂಡುವ ಕಾಲದಲ್ಲಿ ಮೂಲ ಕ್ರಯಪತ್ರವನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಮೂಲ ಕ್ರಯ ಪತ್ರ ನಮ್ಮ ಚಿಕ್ಕಪ್ಪನವರ ಬಳಿ ಇದೆ.

ನಿಪಿ. 13 ಅನ್ನು ನಮ್ಮ ಚಿಕ್ಕಪ್ಪ ಬರೆಸಿರುತ್ತಾರೆ. ಇದನ್ನು ಈ ದಾವೆಗಾಗಿ ತರಿಸಿಕೊಂಡಿದ್ದೇವೆ ಎಂದರೆ ಸರಿ. ನಿ.ಪಿ. 13 ರಲ್ಲಿ ಸಾಕ್ಷಿದಾರರ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ಸುಳ್ಳು ವಂಶವೃಕ್ಷವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೊಡ್ಡಣ್ಣ ಎಂಬುವವರು 1953ನೇ ಸಾಲಿನಲ್ಲಿ ಸರ್ವೆ ನಂ. 292 ರಲ್ಲಿ 3 ಎಕರೆ 17 ಗುಂಟೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ 1964 ರಲ್ಲಿ ಮರು ಖರೀದಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

ದಿ: 15.07.1967 ರಲ್ಲಿ ದೊಡಣ್ಣ ಎಂಬುವವರು ಸದರಿ ಸ್ವತ್ತನ್ನು ಎನ್.ಗುಳಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.ದಿ: 24.07.1977ರಲ್ಲಿ ಎನ್.ಗುಳಪ್ಪ ರವರು ಪುನ: ದೊಡಣ್ಣನವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಇರಬಹುದು. ಸದರಿ ಕ್ರಯಪತ್ರದಲ್ಲಿ ಚೆನ್ನಪ್ಪ ಎಂಬುವವರು ಸಾಕ್ಷಿಯಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ಆ ರೀತಿ ಖರೀದಿಸಿದ ನಂತರ ಪೂರ್ತಿ ಸ್ವತ್ತಿನಲ್ಲಿ ದೊಡ್ಡಣ್ಣನವರು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

1967 ರಿಂದ ದೊಡ್ಡಣ್ಣ ನವರ ಹೆಸರಿಗೆ ಆರ್.ಟಿ.ಸಿ ನಮೂದಾಗಿದೆ ಎಂದರೆ ಇರಬಹುದು. ನಂತರ ದೊಡ್ಡಣ್ಣನವರು ದಿ: 11.05.1989 ರಂದು ತನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟರು ಎಂದರೆ ಸರಿ. ವಿಭಾಗ ಪತ್ರದಂತೆ ಅವರ ಮಕ್ಕಳಿಗೆ ಆರ್.ಟಿ.ಎಸ್ ಅಲ್ಲಿ ಖಾತೆ ವರ್ಗಾವಣೆ ಆಗಿರುವುದು ನಮೂದಾಗಿದೆ ಎಂದರೆ ಸರಿ. ನಂತರ 3 ಮತ್ತು 4ನೇ ಪ್ರತಿವಾದಿಗಳು 2ನೇ ಪ್ರತಿವಾದಿಗೆ ಸದರಿ ಜಮೀನಿನ ಪೈಕಿ 25.5 ಗುಂಟೆಯನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಂತರ 3 ಮತ್ತು 4ನೇ ಪ್ರತಿವಾದಿಗಳು 1ನೇ ಪ್ರತಿವಾದಿಗೆ ದಿ: 31.03.1994 ರಲ್ಲಿ ಕ್ರಯ ಮಾಡಿದ್ದಾರೆ ಎಂದರೆ ಸರಿ.

ಸದರಿ ಕ್ರಯ ಪತ್ರದಲ್ಲಿ 1ನೇ ವಾದಿ ಸಾಕ್ಷಿಯಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಒಪ್ಪಿಕೊಂಡಿರುತ್ತಾರೆ: ಕಾರಣ ಅದನ್ನು ನಿ.ಡಿ. 1 ಎಂದು ನಿಶಾನಿಸಿಕೊಳ್ಳಲಾಯಿತು. 2ನೇ ಪ್ರತಿವಾದಿಗೆ ಆದ ಕ್ರಯಪತ್ರದಲ್ಲೂ ಸಹ ಗೋಪಾಲಪ್ಪ ಸಹಿ ಹಾಕಿದ್ದಾರೆ ಎಂದರೆ ಸರಿ. ಈ ಎಲ್ಲಾ ಸಂಗತಿಗಳು ನಮಗೆ ಗೊತ್ತಿದ್ದರು ದಾವೆ ಹೂಡುವಾಗ ಹೇಳಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರಗಳಂತೆ 1 ಮತ್ತು 2ನೇ ಪ್ರತಿವಾದಿಗಳು ತಲಾ 25 ಗುಂಟೆ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಆರ್.ಟಿ.ಸಿ. ಯನ್ನು ನನ್ನ ಹೆಸರಿಗೆ ಆಗಲಿ ನಮ್ಮ ಚಿಕ್ಕಪ್ಪನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಾತನ ಹೆಸರು ನಮೂದಾಗಿರುತ್ತದೆ ಎಂದು ಹೇಳಿರುತ್ತಾರೆ. ನಮ್ಮ ತಾತ ಚೆನ್ನಪ್ಪ 1983–84 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ.

ಈ ಆಸ್ತಿಗಳು ನಮ್ಮ ತಾತನ ಹೆಸರಿನಲ್ಲಿರುವ ವಿಚಾರ 1993ನೇ ಸಾಲಿನ ನಂತರ ತಿಳಿದಿರುತ್ತದೆ. ಆಗ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಡಲಿಲ್ಲ ಎಂದರೆ ಸರಿ. ಆಗ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಮ್ಮ ಚಿಕ್ಕಪ್ಪನವರು ಅನಕ್ಷರಸ್ಥರು ಎಂದು ಹೇಳಿರುತ್ತಾರೆ. ದಾವಾ ಸ್ವತ್ತು ಮೂಲತ: 3 ಮತ್ತು 4 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನಾವು ಆಗ ಯಾವುದೇ ಅರ್ಜಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ತದ ನಂತರ ನಾವು ಯಾವುದೇ ರೆವಿನ್ಯೂ ಅಧೀಕಾರಿಗಳ ಮುಂದೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಸ್ವಾಧೀನದಲ್ಲಿರುವವರ ಹೆಸರನ್ನು ಕಾಲಂ ನಂ. 9 ಮತ್ತು 10 ರಲ್ಲಿ ನಮೂದಿಸುತ್ತಾರೆ ಎಂದರೆ ಸರಿ. ನಿಪಿ. 2 ರಿಂದ 8 ರಲ್ಲಿ ಆ ರೀತಿ ನನ್ನ ಹೆಸರಿಗೆ ಆಗಲಿ, ನಮ್ಮ ಚಿಕ್ಕಪ್ಪನ ಹೆಸರಿಗೆ ನಮೂದಾಗಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿಲ್ಲದ ಕಾರಣ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. 3 ಮತ್ತು 4ನೇ ಪ್ರತಿವಾದಿಗಳು ಇದೇ ಸರ್ವೆ ನಂ. ನ 1 ಎಕರೆ 20 ಗುಂಟೆ ಜಮೀನನ್ನು ಸೈಯದ್ ಅಸ್ಲಾಂ ಪಾಷಾ & ಜಯರಾಮ ಎಂಬುವರಿಗೆ ದಿ: 06.02.1985ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ತದ ನಂತರ ಜಯರಾಮ ಎಂಬುವವರಿಗೆ ಅದೇ 1 ಎಕರೆ 20 ಗುಂಟೆ ಪೈಕಿ 1 ಎಕರೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ 20 ಗುಂಟೆಯನ್ನು ದಿ: 06.02.1995 ರಲ್ಲಿ ಮುನಿಚಿನ್ನಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಿ: 02.09.1998ರಲ್ಲಿ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಇರಬಹುದು. ಆಂಜಿನಪ್ಪನವರು ತನಗೆ ವಿಭಾಗ ಸ್ವತ್ತಿನ ಮೂಲಕ ಬಂದ ಸ್ವತ್ತನ್ನು ವೆ .ನಾರಾಯಣಸ್ವಾಮಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಚಿಕ್ಕಗುಂಡಪ್ಪನವರು ತನಗೆ ಬಂದ ಸ್ವತ್ತನ್ನು ವೈ.ನಾರಾಯಣಪ್ಪಸ್ವಾಮಿರವರು ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಇರಬಹುದು.ನಂತರ ವೈ.ನಾರಾಯಣಸ್ವಾಮಿಯವರು ಆಸೀಫ ರವರಿಗೆ 27.01.2005 ರಂದು ಮಾರಾಟ ಮಾಡಿದ್ದಾರೆ ಎಂದರೆ ಇರಬಹುದು. ಅವರುಗಳ ಈ ದಾವೆಯಲ್ಲಿ ಪಕ್ಷದಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

1ನೇ ಪ್ರತಿವಾದಿ ದಿ: 18.11.2005 ರಲ್ಲಿ ಕೃಷ್ಣಮ್ಮ ಎಂಬುವವರಿಗೆ 10 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅವರನ್ನು ಸಹ ಪಕ್ಷದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಉಳಿಕೆ 15 ಗುಂಟೆ ಜಮೀನಿನ ಆಧಾರದ ಮೇಲೆ 1ನೇ ಪ್ರತಿವಾದಿ ಟೌನ್ ಕೊ–ಆಪರೇಟಿವ್ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಸಾಲವನ್ನು 5 ಮತ್ತು 6 ನೇ ಪ್ರತಿವಾದಿಗಳು ತಿರುವಳಿ ಮಾಡಿದ್ದಾರೆ ಎಂದರೆ ಇರಬಹುದು. ಸದರಿ ಸ್ವತ್ತನ್ನು ಅವರು ದಿ: 06.06.2006 ರಲ್ಲಿ ಲಕ್ಷ್ಮಮ್ಮ ಎಂಬುವವರಿಗೆ ದಾನ ಪತ್ರದ ಮೂಲಕ ನೀಡಿದ್ದಾರೆ ಎಂದರೆ ಸರಿ. ಅದರಂತೆ ರಾಮಾಂಜಿರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಅವರು ದಾನ ಪತ್ರದ ಆಧಾರದ ಮೇರೆಗೆ ರೂ.2,50,000/–ಗಳು ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಇರಬಹುದು.

ಸದರಿ ಸ್ವತ್ತಿನಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಮಾರಾಟ ಮಾಡಿರುವ ಸ್ವತ್ತನ್ನು ಬಿಟ್ಟು ಉಳಿದ ಸ್ವತ್ತಿನದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳಿರುತ್ತಾರೆ. ನಾವು ಎಂದಿಗೂ ಸಹ ದಾವಾ ಆಸ್ತಿ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. 1 ಎಕರೆ 20 ಗುಂಟೆ ಜಮೀನನಲ್ಲಿ ಸೈಯದ್ ಆಸೀಫ ಎಂಬುವವರು ಲೇಔಟ್ ನಿರ್ಮಿಸಿದ್ದಾರೆ ಎಂದರೆ ಸರಿ.ನಮಗೆ ಆಗಿರುವ ಕ್ರಯ ಪತ್ರ ದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಕ್ರಯ ಪತ್ರದಂತೆ ನಾವಾಗಲಿ ನಮ್ಮ ತಾತನವರಾಗಲಿ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೆವಿನ್ಯೂ ದಾಖಲಾತಿಗಳು ನಮೂದಿಲ್ಲ ಎಂದರೆ ಸಾಕ್ಷಿ 1968 ರಿಂದ ನಮೂದಾಗಿರುತ್ತದೆ ಎಂದು ಹೇಳಿರುತ್ತಾರೆ.

ದಾವಾ ಆಸ್ತಿ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಮತ್ತು ಸ್ವಾಧೀನ ಪ್ರತಿವಾದಿಗಳು ಹೊಂದಿದ್ದು, ನಮಗೆ ಇಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನದಲ್ಲಿ ಸ್ವಾಧೀನ ಇದ್ದೇವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇವೆ ಎಂದು ಹೇಳಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು: ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**